# 'ಸ್ತ್ರೀ ಅಸ್ಮಿತೆ: ವಿಭಿನ್ನ ನೆಲೆಗಳು' ಕೃತಿಯ ಒಳನೋಟ

**ಕೆ. ಅನಂತಾಚಾರ್**

ಸಂಶೋಧನಾರ್ಥಿ, ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

DOI: https://doi.org/10.5281/zenodo.15580909

## ABSTRACT:

ಹೆಣ್ಣು ಯಾವಾಗಲೂ ಒಂದು ಮೂಲೆಗುಂಪಿನಂತೆ ಎಂಬ ವಾದ ಸದಾ ಹರಡಿ ಹೋಗಿರುವ ಸಂದರ್ಭದಲ್ಲಿ ಚೇತನಾ ಹೆಗಡೆ ಅವರ "ಸ್ತ್ರೀ ಅಸ್ಮಿತೆ : ವಿಭಿನ್ನ ನೆಲೆಗಳು" ಕೃತಿಯು ವಿಭಿನ್ನ ಮಾದರಿಯ ಅಧ್ಯಯನವನ್ನು ನಮ್ಮ ಮುಂದಿಡುತ್ತದೆ. ಈ ಕೃತಿಯು ವ್ಯಕ್ತಿ ಮತ್ತು ವ್ಯಕ್ತಿತ್ವಗಳನ್ನು ಸದಾ ಕಾಲ ಬೇರೆಯಾಗಿ ಕಾಣುವ ವ್ಯತ್ಯಾಸಗಳಿಂದ ಹೊರತಾಗಿದೆ. ಹಾಗೆಂದ ಮಾತ್ರಕ್ಕೆ ಎಲ್ಲಾ ಒಂದೇ ಎಂದು ಭಾವಿಸುವ ಹಾಗಿಲ್ಲ. ಜೈವಿಕ ವ್ಯತ್ಯಾಸಗಳನ್ನು ಅಂಗೀಕರಿಸುತ್ತಲೇ ಹೆಣ್ಣಿನ ಅಸ್ಮಿತೆಯನ್ನು ಗುರುತಿಸುವ ಕೆಲಸವನ್ನು ಲೇಖಕಿ ಮಾಡಿದ್ದಾರೆ. ಹೆಣ್ಣು ಮತ್ತು ಹೆಣ್ತನವನ್ನು ಹೆಣ್ಣು ಅಧ್ಯಯನ ಮಾಡಿದಾಗ ಉಂಟಾಗುವ ತೀಕ್ಷ್ಣ ಬದಲಾವಣೆಗಳು ಮತ್ತು ಪರಿಣಾಮಗಳನ್ನು ಕಟ್ಟಿಕೊಡುವಲ್ಲಿ ಈ ಕೃತಿಯು ಪರಿಣಾಮಕಾರಿಯಾಗಿದೆ ಎನ್ನಲು ಅಡ್ಡಿಯಿಲ್ಲ. ವರ್ಜೀನಿಯಾ ವೂಲ್ಫ್ ಕೇಳುತ್ತಾಳೆ ಹೆಣ್ಣಿಗೆ ಒಂದು ಪ್ರತ್ಯೇಕವಾದ ಕೊಠಡಿಯನ್ನು ಕೊಡಿ ಎಂದು. ಆದರೆ ಹಾಗೆ ಕೊಠಡಿಯನ್ನು ಕೊಡುವ ಮೂಲಕ ಅವಳನ್ನು ಮತ್ತೊಮ್ಮೆ ಅವಳದ್ದೇ ಕೊಠಡಿಯಲ್ಲಿ, ಅವಳದ್ದೇ ಕೈಯನ್ನು, ಅವಳದ್ದೇ ಹಗ್ಗದಿಂದ ಕಟ್ಟಿದಂತಾದೀತು. ಬದಲಾಗಿ ಪ್ರತ್ಯೇಕವಾದ ಕೊಠಡಿ ಎಂಬುದನ್ನು ದೈಹಿಕವಾಗಿ ಮಾತ್ರವಲ್ಲದೇ ಮಾನಸಿಕವಾಗಿ ಹಾಗೂ ಅವಳ ಆಲೋಚನೆಗಳಿಗೂ ನೀಡುವುದು ಒಳಿತು.

## KEYWORDS:

ಸ್ತ್ರೀವಾದ, ಅಸ್ಮಿತೆ, ಹೆಣ್ತನ, ತಾಯ್ತನ, ಸಮಾನತೆ.

ಸ್ತ್ರೀವಾದ ಎಂಬುದು ಸ್ತ್ರೀಯರನ್ನೇ ಕೇಂದ್ರಿಕರಿಸಿದ ಚಿಂತನಾಕ್ರಮ. ಇದು ಸ್ತ್ರೀಯರಿಗೆ ಅಧಿಕ ಸವಲತ್ತುಗಳನ್ನು ನೀಡುವಂತೆ ಮಾಡಲು ಪ್ರಯತ್ನಿಸುವ ಆಲೋಚನಾ ಮಾದರಿ ಎಂಬ ಸಾಮಾನ್ಯ ನಂಬಿಕೆಯಿದೆ. ಆದರೆ ವಾಸ್ತವದಲ್ಲಿ ಸ್ತ್ರೀವಾದ ಎಂದರೆ ಸ್ತ್ರೀಯರಿಗೆ ಸಮಾನವಾದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಲಿಂಗಾಧಾರಿತ, ವೈಯುಕ್ತಿಕ, ಮತ್ತು ಸಾಂಸ್ಥಿಕ ಅವಕಾಶಗಳನ್ನು ನೀಡುವುದಾಗಿದೆ. ಸ್ತ್ರೀವಾದವು ಪಾಶ್ಚಾತ್ಯರ ಪ್ರಭಾವದಿಂದ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ್ದರೂ, ಅದನ್ನು ಇಲ್ಲಿ ಬಲಗೊಳಿಸಿದ ಹೂರಣ ಮಾತ್ರ ಕನ್ನಡ ನೆಲೆಯದ್ದೇ ಆಗಿದೆ. ಏಕೆಂದರೆ

18ನೇ ಶತಮಾನದ ಉತ್ತರಾರ್ಧದಲ್ಲಿ ಯುರೋಪಿನಲ್ಲಿ ಹುಟ್ಟಿಕೊಂಡ ಸ್ತ್ರೀವಾದಿ ಚಳುವಳಿಗಳು ತಮಗೆ ಬೇಕಾಗಿದ್ದಂತಹ ಮತದಾನದ ಹಕ್ಕು, ಸಾರ್ವಜನಿಕ ಹುದ್ದೆಗೆ ಸ್ಪರ್ಧಿಸುವುದು, ಕೆಲಸ ಮಾಡುವುದು, ಸಮಾನ ವೇತನ ಗಳಿಸುವುದು, ಆಸ್ತಿ ಹೊಂದುವುದು, ಶಿಕ್ಷಣ ಪಡೆಯುವುದು, ಒಪ್ಪಂದ ಮಾಡಿಕೊಳ್ಳುವುದು, ಮದುವೆಯೊಳಗೆ ಸಮಾನ ಹಕ್ಕನ್ನು ಹೊಂದಿರುವುದು ಸೇರಿದಂತೆ ಮಹಿಳೆಯರ ಹಕ್ಕುಗಳಿಗಾಗಿ ಹುಟ್ಟಿಕೊಂಡಿದ್ದು. ಆದರೆ ಕನ್ನಡದ ಸಂದರ್ಭಕ್ಕೆ ಬಂದಾಗ ಈ ವಿಷಯದಲ್ಲಿ ಸಾಕಷ್ಟು ಮಾರ್ಪಾಡುಗಳಿಗೆ ಕಾರಣವಾಯಿತು. ಉದಾಹರಣೆಗೆ ಸ್ತ್ರೀ ಶಿಕ್ಷಣ, ಸ್ತ್ರೀ– ಪುರುಷ ಸಮಾನ ಹಕ್ಕುಗಳು, ಸ್ವ ನಿರ್ಣಯ, ಸ್ವ ಆಯ್ಕೆ ಮುಂತಾದವುಗಳ ಜೊತೆಗೆ ತನ್ನ ಲೈಂಗಿಕ ಜೀವನದ ಕುರಿತು ತನ್ನ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಲವು ಇಚ್ಛೆಗಳನ್ನು ಪೂರೈಸಿಕೊಳ್ಳಲು ಅನುವು ಮಾಡಿತು. ಸ್ತ್ರೀವಾದ ಕನ್ನಡದಲ್ಲಿ ವಿಶೇಷ ಹೂರಣದೊಂದಿಗೆ ಹೊಸದಾಗಿ ಮೈದಳೆಯಿತು ಎನ್ನಬಹುದು.

ಮಹಿಳಾ ಸಾಹಿತ್ಯ ಎಂಬುದು ಕನ್ನಡದಲ್ಲಿ ಬಹು ಹಿಂದಿನಿಂದಲೂ ಇರುವುದೇ, ಆದರೆ ಅದು ಸ್ತ್ರೀವಾದಿ ನೆಲೆಯಲ್ಲಿ ಇರಲಿಲ್ಲ ಬದಲಾಗಿ ಉಳಿದೆಲ್ಲಾ ಸಾಹಿತಿಗಳಂತೆ ತಾವು ಸಾಹಿತ್ಯ ರಚನೆಯಲ್ಲಿ ತೊಡಗಿಕೊಳ್ಳುವ ಆಸಕ್ತಿಯನ್ನು ಅವರು ತೋರುತ್ತಿದ್ದರು. ಆದರೆ ಆಧುನಿಕ ಕಾಲಘಟ್ಟದಲ್ಲಿ ಮಹಿಳಾ ಚಳುವಳಿಗಳ ನಂತರ ಹೆಚ್ಚಿನ ಸ್ತ್ರೀಯರು ಸಾಹಿತ್ಯ ರಚನೆಯಲ್ಲಿ ತೊಡಗಿಕೊಳ್ಳಲು ಆಸಕ್ತಿಯನ್ನು ತೋರುತ್ತಿದ್ದಾರೆ. ಇದರಲ್ಲಿ ಮಹಿಳಾ ಕೇಂದ್ರಿತ ಸಾಹಿತ್ಯ, ಸ್ತ್ರೀ ಸಂಶೋಧನೆ, ವಿಮರ್ಶೆ, ಸಂಸ್ಕೃತಿ ಚಿಂತನೆ ಮುಂತಾದವುಗಳನ್ನು ಒಳಗೊಂಡಿದೆ. ಆಧುನಿಕತೆಯ ನಂತರದ ಸಾಹಿತ್ಯದಲ್ಲಿ ಸ್ತ್ರೀಯು ಒಂದು ನಿರ್ದಿಷ್ಟ ಮತ್ತು ಸಿದ್ಧ ಮಾದರಿಯ ಪಾತ್ರವಾಗಿರದೆ ತಾನು ತನ್ನ ಅಸ್ಮಿತೆಯ ಪ್ರತೀಕವಾಗಿ ಸಾಹಿತ್ಯ ರಚನೆಯನ್ನು ಮಾಡಿದ್ದಾಳೆ. ಸ್ತ್ರೀ ಅಸ್ಮಿತೆ ಎಂಬುದು ಆಕೆಯ ಜೀವನದ ಕುರಿತ ನಿರ್ಧಾರಗಳು ಮತ್ತು ಅನುಭವಗಳನ್ನು ತಾನು ಸ್ವತಹ ಅನುಭವಿಸುವ ಹಕ್ಕು ಹಾಗೂ ಬಾಧ್ಯತೆಗಳನ್ನು ಹೊಂದುವುದೇ ಆಗಿದೆ. ಈ ಕೃತಿಯ ಲೇಖಕರು ತಮ್ಮ ವಿಭಿನ್ನ ನಿಲುವುಗಳ ಮೂಲಕ ಸ್ತ್ರೀ ಅಸ್ಮಿತೆಯನ್ನು ವಿಶಿಷ್ಟವಾಗಿ ನಿರೂಪಿಸಿದ್ದಾರೆ. ಇಲ್ಲಿ ಅವರ ಪ್ರಬುದ್ಧ ವಿಮರ್ಶಾ ಆಯಾಮವೊಂದು ತೆರೆದುಕೊಳ್ಳುತ್ತದೆ.

ಡಾ.ಚೇತನಾ ಹೆಗಡೆ ಅವರ ‘‘ಸ್ತ್ರೀ ಅಸ್ಮಿತೆ : ವಿಭಿನ್ನ ನೆಲೆಗಳು’’ ಕೃತಿಯು ವಿಭಿನ್ನ ಮಾದರಿಯ ಅಧ್ಯಯನವನ್ನು ನಮ್ಮ ಮುಂದಿಡುತ್ತದೆ. ಹೆಣ್ಣನ್ನು ಕೇವಲ ಹೆಣ್ಣಾಗಿ ಮಾತ್ರ ಕಂಡರೆ ಸಾಕು ಅವಳನ್ನು ಮತ್ತೇನೊ ಒಂದು ವಿಭಿನ್ನವಾದ ಶಕ್ತಿಯಂತೆ ರೂಪಿಸದಿರುವಂತೆ ಪ್ರಚೋದಿಸುತ್ತದೆ. ಹೆಣ್ಣು ಮತ್ತು ಗಂಡೆಂಬುವು ಕೇವಲ ಜೈವಿಕವಾದ ವ್ಯತ್ಯಾಸಗಳೇ ಹೊರತಾಗಿ ಬೌದ್ಧಿಕವಾಗಿ ಅಥವಾ ಮಾನಸಿಕವಾಗಿ ಇಂತಹ ಯಾವುದೇ ವ್ಯತ್ಯಯಗಳನ್ನು ಪ್ರಕೃತಿಯು ನಿರ್ಮಿಸಿಲ್ಲ. ಮಾನವರು ಸೃಷ್ಟಿ

ಮಾಡಿಕೊಂಡ ವ್ಯತ್ಯಾಸಗಳಿಗೆ ಸಂಸ್ಕೃತಿ ಮತ್ತು ಸಾಮಾಜಿಕ ಸಾಮರಸ್ಯಗಳನ್ನು ಬಲಿಕೊಡುತ್ತಾರೆ. ಹಾಗಾಗಿ ಅಂತಹ ಕೃತ್ಯಗಳು ನಡೆಯದಿರುವಂತೆ ಸಾಧಿಸುವಲ್ಲಿ ಸಾಹಿತ್ಯ ಮತ್ತು ಸಾಹಿತಿಗಳ ಶ್ರಮ ಅಪಾರ ಎಂಬುದನ್ನು ಅವರು ಇಲ್ಲಿ ಗುರುತಿಸುತ್ತಾರೆ.

ಈ ಕೃತಿಯು ವ್ಯಕ್ತಿ ಮತ್ತು ವ್ಯಕ್ತಿತ್ವಗಳನ್ನು ಸದಾ ಕಾಲ ಬೇರೆಯಾಗಿ ಕಾಣುವ ವ್ಯತ್ಯಾಸಗಳಿಂದ ಹೊರತಾಗಿದೆ. ಜೈವಿಕ ವ್ಯತ್ಯಾಸಗಳನ್ನು ಅಂಗೀಕರಿಸುತ್ತಲೇ ಹೆಣ್ಣಿನ ಅಸ್ಮಿತೆಯನ್ನು ಗುರುತಿಸುವ ಕೆಲಸವನ್ನು ಲೇಖಕಿ ಮಾಡಿದ್ದಾರೆ. ಹೆಣ್ಣು ಮತ್ತು ಅವಳ ಅಸ್ಮಿತೆಯನ್ನು ಸದಾ ರಕ್ಷಣಾತ್ಮಕ ವಿಧಾನಗಳ ಮೂಲಕ ಚಿತ್ರಿಸಿರುವುದನ್ನು ನಾವಿಲ್ಲಿ ಗಮನಿಸಬಹುದು. ಅಧುನಿಕ ಕಾಲದಲ್ಲಿ ಮಹಿಳಾವಾದ ಎಂಬುದು ಕೇವಲ ಪುರುಷ ವಿರೋಧಿ ವಾದದಂತೆ ಪ್ರವರ್ತಿಸುತ್ತಿರುವಾಗ ಈ ಮಾದರಿಯ ರಕ್ಷಣಾತ್ಮಕ ಬರಹಗಾರಿಕೆ ಗುಣಾತ್ಮಕ ಪರಿಣಾಮವನ್ನು ಓದುಗರಲ್ಲಿ ಉಂಟುಮಾಡುತ್ತದೆ.

ಹೆಣ್ಣು ಮತ್ತು ಹೆಣ್ತನವನ್ನು ಹೆಣ್ಣು ಅಧ್ಯಯನ ಮಾಡಿದಾಗ ಉಂಟಾಗುವ ತೀಕ್ಷ್ಣ ಬದಲಾವಣೆಗಳು ಮತ್ತು ಪರಿಣಾಮಗಳನ್ನು ಕಟ್ಟಿಕೊಡುವಲ್ಲಿ ಈ ಕೃತಿಯು ಪರಿಣಾಮಕಾರಿಯಾಗಿದೆ ಎನ್ನಲು ಅಡ್ಡಿಯಿಲ್ಲ. ವರ್ಜೀನಿಯಾ ವೂಲ್ಫ್ ಕೇಳುತ್ತಾಳೆ ಹೆಣ್ಣಿಗೆ ಒಂದು ಪ್ರತ್ಯೇಕವಾದ ಕೊಠಡಿಯನ್ನು ಕೊಡಿ ಎಂದು. ಆದರೆ ಹಾಗೆ ಕೊಠಡಿಯನ್ನು ಕೊಡುವ ಮೂಲಕ ಅವಳನ್ನು ಮತ್ತೊಮ್ಮೆ ಅವಳದ್ದೇ ಕೊಠಡಿಯಲ್ಲಿ, ಅವಳದ್ದೇ ಕೈಯನ್ನು, ಅವಳದ್ದೇ ಹಗ್ಗದಿಂದ ಕಟ್ಟಿದಂತಾದೀತು. ಬದಲಾಗಿ ಪ್ರತ್ಯೇಕವಾದ ಕೊಠಡಿ ಎಂಬುದನ್ನು ದೈಹಿಕವಾಗಿ ಮಾತ್ರವಲ್ಲದೇ ಮಾನಸಿಕವಾಗಿ ಹಾಗೂ ಅವಳ ಆಲೋಚನೆಗಳಿಗೂ ನೀಡುವುದು ಒಳಿತು. ಅವಳ ಆಗು ಹೋಗುಗಳ ಕುರಿತು ಅವಳೇ ಸ್ವನಿರ್ಣಯಗಳನ್ನು ತೆಗೆದುಕೊಳ್ಳುವ ಮತ್ತು ಅದರಿಂದ ಉಂಟಾಗಬಹುದಾದಂತಹ ಎಲ್ಲಾ ಪರಿಣಾಮಗಳಿಗೂ ಆಕೆಯೇ ಜವಾಬ್ದಾರಳಾಗಿರುಂತೆ ಮಾಡುವುದೇ ಒಳಿತು. ಇಂತಹ ಹಲವಾರು ವಿಷಯಗಳನ್ನು ಸಾಹಿತ್ಯಿಕ ಆಧಾರಗಳ ಮೂಲಕ ವ್ಯಕ್ತಿತ್ವ ಪೂರ್ಣವಾಗಿ ತಿಳಿಸಿದ್ದಾರೆ. ಇದಕ್ಕೆ ಕನ್ನಡದ್ದೇ ಹಲವಾರು ಪ್ರಾತಿನಿಧಿಕ ಲೇಖಕಿಯರ ಕಥೆಗಳನ್ನು ಅವರು ಗಮನಿಸಿದ್ದಾರೆ. ಅದಕ್ಕೆ ಪೂರಕವಾಗುವಂತಹ ಬೇರೆ ಬೇರೆ ಸಾಹಿತ್ಯ ಪ್ರಕಾರಗಳನ್ನು ಅವರು ಬಳಸಿಕೊಂಡಿರುವುದು ಸೂಕ್ತ ಪ್ರಯೋಗದಂತೆಯೇ ಕಾಣಿಸಿಕೊಂಡಿದೆ.

ಚೇತನಾ ಹೆಗಡೆ ಅವರ ಮುಖ್ಯ ವಿಮರ್ಶಾ ಕಸುವು ಇರುವುದು ಅವರು ಓದಿದ ಸಾಹಿತ್ಯಿಕ ಕೃತಿಗಳನ್ನು ಮತ್ತು ಪಾರಂಪರಿಕ ವಿಚಾರಗಳನ್ನು ಓದುಗರಿಗೆ ಅರ್ಥಮಾಡಿಸುವಲ್ಲಿ. ತಾವು ತಿಳಿದದ್ದನ್ನು ಆಧಾರಗಳ ಮೂಲಕ ವಿಷದಿಕರಿಸುತ್ತಾರೆ. ಮುಂದಾಗಬೇಕಾದ ಬದಲಾವಣೆಗಳ ಅಗತ್ಯ ಮತ್ತು ಸಾಧಕ – ಬಾಧಕಗಳನ್ನು ಸೂಚ್ಯವಾಗಿ ಚರ್ಚಿಸುತ್ತಾರೆ. ಈ ಮೂಲಕ ಹಿಂದೆಯೇ ಹೇಳಿದಂತೆ ಕೃತಿಯ

ಗುಣಾತ್ಮಕ ಮಟ್ಟವು ಹೆಚ್ಚಳವಾಗುತ್ತದೆ. ಸ್ತ್ರೀಮೂಲ ವಿಮರ್ಶೆಯ ಹಲವು ಮಾದರಿಗಳನ್ನು ನಾವಿಲ್ಲಿ ಕಾಣಲು ಅವಕಾಶಗಳಿರುತ್ತವೆ. ಈ ಕೃತಿಯನ್ನು ಓದುವಾಗ ಕೇವಲ ಸ್ತ್ರೀಯರ ಕುರಿತು ಬರೆದ ಸ್ತ್ರೀವಾದಿ ಸಾಹಿತಿಗಳ ಕೃತಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸದೆ ಸಾಧ್ಯವಾದಷ್ಟು ಎಲ್ಲಾ ಕೃತಿಗಳನ್ನು ಅನುಲಕ್ಷಿಸಿರುವುದು ಮುಂಬರುವ ಓದುಗರನ್ನು ಉತ್ತೇಜಿಸುತ್ತದೆ. ಜೊತೆಗೆ ಕಾಲಕಾಲಕ್ಕೆ ಹೆಣ್ಣು ತಾನು ಬದಲಾಗುತ್ತಿರುವುದನ್ನು ಅರಿಯುತ್ತಲೇ ತನ್ನನ್ನು ಸಮಾಜವೂ (ಗಂಡು ಸಮಾಜವೂ ಸೇರಿದಂತೆ) ನೋಡುತ್ತಿರುವ ದೃಷ್ಟಿಕೋನದಲ್ಲಿಯೂ ಆಗುತ್ತಿರುವ ಬದಲಾವಣೆಗಳನ್ನು ಚರ್ಚೆಗೆ ಒಳಪಡಿಸುತ್ತಾರೆ. ಅದು ಕೆಲವೊಮ್ಮೆ ವಿಮರ್ಶೆಯಂತೆಯೂ ಕಾಣಿಸಿಕೊಂಡು ಹೊಸ ಆಲೋಚನೆಗಳಿಗೆ ತೆರೆದುಕೊಳ್ಳುತ್ತದೆ.

ಇಲ್ಲಿಯವರೆಗೂ ಕನ್ನಡದಲ್ಲಿ ಸಾಕಷ್ಟು ಮಹಿಳಾಪರ ಚಿಂತನೆ, ಸಾಹಿತ್ಯ, ವಿಮರ್ಶೆ ಮತ್ತು ಸಂಶೋಧನೆಗಳು ಬಂದಿವೆ. ಚೇತನಾ ಹೆಗಡೆ ಅವರ ಈ ಕೃತಿ ಕನ್ನಡ ಸಾಹಿತ್ಯವನ್ನು ಮತ್ತು ವಿಮರ್ಶಾ ಲೋಕವನ್ನು ಅನುಲಕ್ಷಿಸಿ ಹೊಸದೊಂದು ಚಿಂತನ ಮಾದರಿಯನ್ನು ಅಳವಡಿಸಿಕೊಂಡಿರುವಂತೆ ಕಾಣುತ್ತದೆ. ಕನ್ನಡದಲ್ಲಿ ಎರಡು ಬಗೆಯ ಅಧ್ಯಯನಗಳಿವೆ 1) ಸಾಹಿತ್ಯ ಅಧ್ಯಯನ 2) ತೌಲನಿಕ ಅಧ್ಯಯನ. ಇದರಲ್ಲಿ ಇವರು ತೌಲನಿಕ ಮಾದರಿಯನ್ನು ಅನುಸರಿಸಿ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಸ್ತ್ರೀ ಸಂವೇದನೆಗಳು ಮತ್ತು ಅಸ್ಮಿತೆ ಎಂಬುದು ಹೇಗೆ ಬದಲಾವಣೆಗಳನ್ನು ಕಾಣುತ್ತಾ ಸಾಗಿತು ಎಂಬುದನ್ನು ತೋರಿಸಿದ್ದಾರೆ. ಹೆಣ್ಣು ಬರೆಯುವ ಸಾಹಿತ್ಯ ಅಥವಾ ಹೆಣ್ಣಿನ ಕುರಿತಾಗಿ ಬರೆಯುವ ಸಾಹಿತ್ಯ ಅಧಿಕವಾಗಿ ಸಮಾಜದಲ್ಲಿ ಅಥವಾ ಸಮುದಾಯದಲ್ಲಿ ಈಗಾಗಲೇ ಇರುವ ಸಂಸ್ಕೃತಿಯ ಪ್ರತಿಬಿಂಬವಾಗಿಯೇ ನಿರೂಪಿತವಾಗಿರುತ್ತದೆ. ಇಲ್ಲಿಯವರೆಗೆ ಕನ್ನಡದಲ್ಲಿ ಹಲವಾರು ಮಹಿಳಾ ಬರಹಗಾರ್ತಿಯರು ಆಗಿ ಹೋಗಿದ್ದಾರೆ. ಅವರೆಲ್ಲರನ್ನು ಗಮನಿಸಿದಾಗ ಈ ವಿಷಯ ಹೆಚ್ಚು ಮುನ್ನೆಲೆಗೆ ಬರುತ್ತದೆ. ಈ ಕೃತಿಯು ಕೂಡ ಅಂತಹುದೇ ಒಂದು ಪ್ರಯತ್ನ. ಏಕೆಂದರೆ ಇಲ್ಲಿ ಕೇವಲ ಹೆಣ್ಣು ಹೆಣ್ಣಾಗಿ ಮಾತ್ರ ತನ್ನ ಕುರಿತಾದ ವಿಷಯಗಳ ಚರ್ಚೆ ಮಾಡಿದ್ದಾಳೆಯೇ ಹೊರತಾಗಿ ಹೆಣ್ಣು ಗಂಡು ವಿರೋಧಿಯಾಗಿ ಗಂಡನ್ನು ತುಳಿಯುವ ಅಥವಾ ಆತನಿಗಿಂತ ತಾನು ಮಿಗಿಲು ಎಂದು ಹೇಳುವ ವಿಚಿತ್ರ ಚರ್ಚೆ ಇಲ್ಲಿ ಬಂದಿಲ್ಲ. ಹಾಗಾಗಿ ಇದೊಂದು ಸಮಾನ ಅಂತರವನ್ನು ಗಂಡು ಹೆಣ್ಣುಗಳ ನಡುವೆ ಕಾಯ್ದಿರಿಸಿಕೊಂಡಿದೆ.

ಹೆಣ್ಣು ಗಂಡಿಗೆ ಸಮಾನಳು ಎಂತಲೋ, ಆತನಿಗಿಂತ ಮಿಗಿಲಾದವಳು ಎಂತಲೋ ಅಥವಾ ಆತನಿಗಿಂತ ಕೀಳಾದವಳು ಎಂದು ಹೇಳುವಾಗ ಗಂಡನ್ನು ಹೆಣ್ಣಿನಿಂದ ಬೇರ್ಪಡಿಸುವ ಕಣ್ಣಿಗೆ ಕಾಣಿಸದ ರೇಖೆಯನ್ನು ಸಮಾಜವು ಎಳೆದಿದೆ. ಹಾಗಾಗಿ ಆ ರೇಖೆಯನ್ನು ಸಾಧ್ಯವಾದಷ್ಟು ಅಳಿಸುವ, ಇನ್ನಿಲ್ಲದಂತೆ ಮಾಡುವ

ಕಾರ್ಯ ಹೆಚ್ಚು ಮೌಲಿಕವಾದದ್ದು. ಬದಲಾಗಿ ಗೆರೆಯನ್ನು ದಾಟುವ ಅಥವಾ ಅದರ ಮೇಲೆ ನಿಲ್ಲುವ ಪ್ರಯತ್ನ ಸಮಾಜಕ್ಕೆ ಎಂದಾದರೂ ಸರಿ ಹಾನಿಕಾರಕವೇ ಆಗುತ್ತದೆ. ಹಾಗಾಗಿ ಹೆಣ್ಣು ಗಂಡುಗಳನ್ನು ಲಿಂಗದ ಆಧಾರದ ಮೇಲೆ ಬೇರ್ಪಡಿಸುವುದಕ್ಕಿಂತ ಅವರನ್ನು ಕೇವಲ ಜೈವಿಕ ವ್ಯತ್ಯಾಸಗಳೆಂದು ಪರಿಗಣಿಸುವುದು ಲೇಸಾದಿತು. ಈ ಕೃತಿಯು ಹಲವಾರು ಕಥೆಗಳನ್ನು ಗಣನೆಗೆ ತೆಗೆದುಕೊಂಡು ಅದರಲ್ಲಿಯ ಸಾಂಸ್ಕೃತಿಕ ಅಂಶಗಳನ್ನು ವಿಭಿನ್ನ ನೆಲೆಗಳಲ್ಲಿ ಚರ್ಚಿಸಿದೆ.

ಕೃತಿಯ ಈ ವಾಕ್ಯಗಳನ್ನು ಗಮನಿಸಿದಾಗ ಮೇಲೆ ಹೇಳಿದ ಮಾದರಿಯ ಚಿಂತನೆಗೆ ಪೂರಕವಾಗುವ ಕೆಲವಷ್ಟು ಅಂಶಗಳು ದೊರೆಯುತ್ತವೆ. "ಹೆಣ್ಣಿನ ಲೈಂಗಿಕತೆ, ಮೌಖಿಕ ಪರಂಪರೆಯಲ್ಲಿ ಕಂಡುಬರುವಷ್ಟು ಸಹಜವಾಗಿ ಶಿಷ್ಟ ಸಾಹಿತ್ಯದಲ್ಲಿ ಕಂಡುಬರದು" (ಪು. ಸಂ. 177) , ಎಷ್ಟೋ ಸಲ ತನ್ನ ಧ್ವನಿಯನ್ನು ತಗ್ಗಿಸಿ, ಭಾವನೆಗಳನ್ನು ಹತ್ತಿಕ್ಕಿ, ಅನಿಸಿಕೆಗಳನ್ನು ಬದಿಗೊತ್ತಿ, ವ್ಯವಸ್ಥೆಗೆ ಮೌನವಾಗುವ, ಕೆಲವೊಮ್ಮೆ ಮೂಕವಾಗುವ ಹಲವು ಸ್ತ್ರೀ ಸಮುದಾಯಗಳಿವೆ ಇವು ಸಾಂಪ್ರದಾಯಿಕ ಮೌಲ್ಯಗಳನ್ನು ಸ್ವೀಕರಿಸುವ ಮಾದರಿ. ಇನ್ನೊಂದಷ್ಟು ಮೌನದ ಒಳಗಿನ ನೋವನ್ನು ಪ್ರತಿರೋಧವಾಗಿಸಿ ಮೂಕತೆಯ ಹಿಂದಿನ ಯಾತನೆಯನ್ನು ಅನುಭವಿಸುತ್ತಲೇ ಮೌನವಾಗಿ ಅಂದರೆ ಇರುವ ವ್ಯವಸ್ಥೆಯನ್ನು ಒಪ್ಪಿದಂತೆ ಬದುಕಿಯು ತನ್ನ ಛಾಪನ್ನು ಮೂಡಿಸುವುದು ಅಥವಾ ವಿರೋಧವಾಗಿ ತನ್ನ ಒಳಧ್ವನಿಗೆ ಬೆಂಬಲವನ್ನು ಒದಗಿಸುತ್ತಾ ಸಾಗಿ ತನ್ನ ಅಸ್ಮಿತೆಯನ್ನು ಸ್ಥಾಪಿಸುವ ವಿಭಿನ್ನ ಮಾರ್ಗಗಳನ್ನು ಹುಡುಕುವ ವ್ಯಕ್ತಿತ್ವಗಳಿವೆ. (ಪು. ಸಂ. 208)

ಮೇಲೆ ನೀಡಿರುವ ಎರಡು ವಾಕ್ಯಗಳನ್ನು ಗಮನಿಸಿ ಒಂದರಲ್ಲಿ ಕನ್ನಡದಲ್ಲಿ ಬಂದಿರುವ ಶಿಷ್ಟ ಸಾಹಿತ್ಯಕ್ಕಿಂತ ಹಲವಾರು ಜನಪದ ಕಥೆ ಕಾವ್ಯಗಳು ಹೆಣ್ಣನ್ನು ಹೆಣ್ಣಾಗಿ ಚಿತ್ರಿಸುವಾಗ ಅನುಭವ ಮತ್ತು ಅನುಭವಗಳನ್ನು ಸಮರ್ಥವಾಗಿ ಬಳಸಿಕೊಂಡದ್ದರ ಬಗ್ಗೆ ಅವರಿಗೆ ಹಿರಿಮೆ ಇದೆ. ಇನ್ನೊಂದರಲ್ಲಿ ಸಂಪೂರ್ಣವಾಗಿ ಶಿಷ್ಟ ಸಾಹಿತ್ಯವು ಹೆಣ್ಣನ್ನು ಅವಳ ನೋವುಗಳ ಹಿನ್ನೆಲೆಯಲ್ಲಿ ಮಾತ್ರ ತೋರಿಸಿರುವ ಚಿತ್ರಣವನ್ನು ನೀಡುತ್ತಾರೆ. ಹೆಣ್ಣಿನ ಸಾಮರ್ಥ್ಯ ಮತ್ತು ಅಗತ್ಯಗಳ ಬಗೆಗೆ ಮುಂದವರು ಚರ್ಚಿಸುತ್ತಾ ಸಾಗಿರುವುದನ್ನು ಕಾಣಬಹುದು. ಸಾಂಪ್ರದಾಯಿಕವೋ ವೈಜ್ಞಾನಿಕವೋ ಒಟ್ಟಾರೆ ಹೆಣ್ಣನ್ನು ಅವಳ ಸಾಮರ್ಥ್ಯದ ಮೇಲೆ ಅವಳ ಅಸ್ಮಿತೆಯನ್ನು ಅವಳು ಕಾಪಾಡಿಕೊಳ್ಳಲು ಅನುವು ಮಾಡಿಕೊಟ್ಟರೆ ಸಾಕು ಎಂಬಂತಿರುವ ನಿಲುವುಗಳನ್ನು ತಳೆಯದೆ ಸಾಹಿತಿಗಳು ಅಪ್ಡೇಟ್ ಮಾದರಿಯ ನಿಲುವುಗಳನ್ನು ತಳೆದಿದ್ದಾರೆ ಎಂದು ತಿಳಿಸುತ್ತಾರೆ. ಮೊದಲಲ್ಲಿ ಸಮಾಜಕ್ಕೆ ಹೆದರಿಕೊಂಡು ಅವರು ಸಿದ್ಧ ಮಾದರಿಗಳನ್ನು ಅನುಸರಿಸುತ್ತಿದ್ದರು. ಆದರೆ ಬದಲಾದ ಕಾಲ ಮತ್ತು ಶಿಕ್ಷಣದ ಕಾರಣದಿಂದಾಗಿ ಅವರು ಆ ಸಿದ್ಧ ಮಾದರಿಯನ್ನು ಒಡೆದು ಹಲವಾರು ತುಳಿತಗಳಿಗೆ ಸೆಡ್ಡು ಹೊಡೆದು

ನಿಲ್ಲುತ್ತಿದ್ದಾರೆ ಎಂಬುದನ್ನು ಹಲವಾರು ಕತೆಗಳು ನಿರೂಪಿಸಿವೆ ಎಂಬುದನ್ನು ಕೃತಿಯಲ್ಲಿ ಒತ್ತಿ ಹೇಳಲಾಗಿದೆ. ಕೆಲವು ಬಾರಿ ಸ್ತ್ರೀಯರು ತಮ್ಮ ಮೇಲಾಗುತ್ತಿರುವ ಶೋಷಣೆಯನ್ನು ವಿರೋಧಿಸಿ ತಮ್ಮ ಸ್ವನಿರ್ಧಾರಗಳನ್ನು ತೆಗೆದುಕೊಳ್ಳುವ ಕೆಚ್ಚೆದೆಯನ್ನು ನಾವಿಲ್ಲಿ ಕಾಣಬಹುದು. ಇವುಗಳ ಕುರಿತು ಚರ್ಚಿಸುವಾಗ ಲೇಖಕಿ ಪ್ರತ್ಯೇಕವಾದ ವಿಭಾಗಗಳನ್ನು ಮಾಡಿಕೊಂಡಿದ್ದಾರೆ. ಅದು ಓದುಗರಿಗೆ ಹೆಚ್ಚು ಅನುಕೂಲವನ್ನು ಮಾಡಿಕೊಡುತ್ತದೆ. ಇಲ್ಲಿಯವರೆಗೆ ಶೋಷಣೆಯ ಕುರಿತಾಗಿ ಮಾತನಾಡಿದ್ದ ಕೃತಿಗಳು ಬಹಳ ಪ್ರಮಾಣದಲ್ಲಿ ಕಂಡುಬಂದಿವೆ. ಪ್ರತಿರೋಧದ ಕುರಿತ ಬರವಣಿಗೆಗಳು ಬಂದಿದ್ದಾಗಿದ್ದರೂ ಅದನ್ನು ಸ್ತ್ರೀ ನೆಲೆಯಲ್ಲಿಯೋ, ಕುಟುಂಬ ನೆಲೆಯಲ್ಲಿಯೋ ಕಾಣಲಾಗುತ್ತಿತ್ತು. ಹೊರತಾಗಿ ಅದನ್ನು ಸ್ವರಕ್ಷಣೆಯ ಹಿನ್ನೆಲೆಯಲ್ಲಿ ಕಂಡದ್ದು ಈ ಕೃತಿಯ ವಿಶೇಷವಾಗಿದೆ.

ಆರ್ಥಿಕತೆ ಎಂಬುದರಲ್ಲಿ ಹೆಣ್ಣು ಯಾವಾಗಲೂ ಗಂಡಿನ ಅಧೀನಳಾಗಿಯೇ ಇರಬೇಕಾಗಿತ್ತು. ಏಕೆಂದರೆ ಗಂಡು ದೈಹಿಕವಾಗಿ ಬಲಿಷ್ಠನಾದ್ದರಿಂದ ಮನೆಯಿಂದ ಹೊರ ಹೋಗಿ ದುಡಿಯುವ ಕೆಲಸ ಆತನದ್ದಾಗಿತ್ತು. ಹೆಣ್ಣು ಹಾಗೆ ಮಾಡಲು ಸಾಧ್ಯವಿಲ್ಲವೆಂಬ ಕಾರಣಕ್ಕಾಗಿ ಆಕೆಗೆ ಮನೆಯನ್ನು ಮತ್ತು ಕುಟುಂಬವನ್ನು ನೋಡಿಕೊಳ್ಳುವ ಜವಾಬ್ದಾರಿಗಳನ್ನು ಹೇರಲಾಯಿತು. ಹಾಗಾಗಿ ಸ್ತ್ರೀ ಆರ್ಥಿಕವಾಗಿ ಗಂಡಿನ ಮೇಲೆ ಅವಲಂಬಿತಳಾದಳು. ಅದರಿಂದ ಹೊರಬಂದು ಆರ್ಥಿಕ ಸ್ವಾವಲಂಬನೆ ಹೊಂದುವುದು ಅವಳಿಗೆ ಅನಿವಾರ್ಯವಾಗಿದ್ದು ಅದನ್ನು ಅವಳು ಇಂದು ಸಾಧಿಸಿಕೊಂಡಿದ್ದಾಳೆ. ಆಧುನಿಕ ಕಾಲದಲ್ಲಿ ಆರ್ಥಿಕ ಸ್ವಾವಲಂಬನೆಯನ್ನು ತುಂಬಾ ವಿಭಿನ್ನವಾದ ನೆಲೆಗಳಲ್ಲಿ ಬಳಸಿಕೊಳ್ಳುತ್ತಿದ್ದಾರೆ. “ಆರ್ಥಿಕ ಸ್ವಾವಲಂಬನೆ ಎಂಬುದು ವೈಯಕ್ತಿಕ ಬಿಡುಗಡೆಯೂ ಹೌದು” (ಪು. ಸಂ. 197) ಇಂದು ಹೇಳುವಾಗ ಲೇಖಕರಿಗೆ ಇರುವ ಸಮಾನಾಂತರದ ಚಿಂತನೆ ತಿಳಿಯುತ್ತದೆ. ಆರ್ಥಿಕತೆ ಎಂಬುದು ಯಾರನ್ನು ಮೇಲಾಗಿಸುವ ಅಥವಾ ಕೀಳಾಗಿಸುವ ಪ್ರಕ್ರಿಯೆ ಅಲ್ಲ. ಅದು ನಮ್ಮನ್ನು ಇನ್ನೊಬ್ಬರ ಅಧೀನತೆಯಿಂದ ಬಿಡಿಸಿಕೊಳ್ಳುವ ಮತ್ತು ಹಂಗಿನ ಅಗತ್ಯತೆ ಇಲ್ಲದೆ ಬದುಕುವ ಧೈರ್ಯವನ್ನು ನೀಡುತ್ತದೆ. ಈ ಧೈರ್ಯವೆಂಬುದು ಲಿಂಗದ ಆಧಾರದ ಮೇಲೆ ಬರುವಂತಹದ್ದಲ್ಲ. ಅದು ಕೇವಲ ಜೀವನದ ಅಗತ್ಯಗಳು, ಬದುಕುಳಿಯಲೇಬೇಕಾದ ಅನಿವಾರ್ಯತೆಗಳು ನೀಡುವ ಒಂದು ಪಾಠದಂತೆ. ಆದರೆ ಈ ಆರ್ಥಿಕ ಸ್ವಾವಲಂಬನೆ ಎಂಬುದು ಕೇವಲ ಪುರುಷರಿಗೆ ಮಾತ್ರ ಸೀಮಿತವಾಗಿ ಸ್ತ್ರೀಯರು ಅವರ ಅಧೀನರಾಗುವುದನ್ನು ಇಲ್ಲಿ ಧಿಕ್ಕರಿಸಲಾಗಿದೆ. ಸ್ವಾವಲಂಬನೆ ಎಂಬುದು ಎಲ್ಲರ ಹಕ್ಕು ಎಂಬುದನ್ನು ಪ್ರತಿಪಾದಿಸಲಾಗಿದೆ. ಆಧುನಿಕ ಯುವ ಸಮಾಜ ಅರ್ಥಮಾಡಿಕೊಳ್ಳಬೇಕಾದ ಮುಖ್ಯ ವಿಷಯಗಳಲ್ಲೊಂದು. ಸ್ತ್ರೀ ಪುರುಷರಿಬ್ಬರೂ ತಾವು ಒಂದಷ್ಟು ಸಂಪಾದಿಸಲು ಆರಂಭಿಸಿದ ತಕ್ಷಣ ತಮ್ಮವರಿಂದ ದೂರ ಸರಿಯುವ, ಅವರೆಲ್ಲರೂ ತಮಗಿಂತ ಕೀಳು ಎಂದು ಭಾವಿಸುವ

ಮನಃಸ್ಥಿತಿಯನ್ನು ತಲುಪಿದ್ದಾರೆ. ಅದನ್ನು ಹೋಗಲಾಡಿಸುವ ಅಗತ್ಯ ಎಂದಾದರೂ ಇದೆ. ಅದು ಇಂದೆ ಆಗುವುದು ಒಳ್ಳೆಯದು.

ಮಹಿಳಾ ಸಾಹಿತ್ಯ ಅಥವಾ ಮಹಿಳಾ ಕೇಂದ್ರಿತ ಸಾಹಿತ್ಯ ಯಾಕೆ ಮುಖ್ಯ ಎಂಬುದರ ಬಗ್ಗೆ ಸಂಶೋಧಕಿ ರೆಬೆಕ್ಕ ತಮ್ಮ 'ವೈದೇಹಿ ಮತ್ತು ಓಲ್ಗಾ ಅವರ ಸ್ತ್ರೀವಾದಿ ಚಿಂತನೆಗಳ ಪರಿಕಲ್ಪನೆ' ಎಂಬ ಲೇಖನದಲ್ಲಿ ಹೀಗೆ ಮಂಡಿಸುತ್ತಾರೆ "ಯಾವುದೇ ಭಾಷೆಯ ಸಾಹಿತ್ಯ ಕೃತಿಗಳು ಒಂದು ಸಮಾಜದ ಪ್ರತಿಬಿಂಬವಾಗುತ್ತದೆ. ಸಾಮಾಜಿಕ ಜೀವನದ ಒಳನೋಟಗಳನ್ನು ಅವು ಧ್ವನಿಸುತ್ತವೆ. ಹಾಗೆ ಮಹಿಳಾ ಲೇಖಕಿಯರು ತಮ್ಮ ಸುತ್ತಲಿನ ಸಮಾಜದಿಂದ ತಾವು ಅನುಭವಿಸಿದ ಜೀವನ ಅನುಭವಗಳನ್ನು ಸೂಕ್ಷ್ಮವಾದ ವಿಚಾರಗಳ ತುಡಿತದಿಂದ ಅವರವರ ಕೃತಿಗಳಲ್ಲಿ ವಿವಿಧ ಆಶಯಗಳ ನೆಲೆಯಲ್ಲಿ ವ್ಯಕ್ತಪಡಿಸುತ್ತಾರೆ. ಸಮಕಾಲೀನವಾಗಿ ಅವು ಉಂಟು ಮಾಡಿದ ಪರಿಣಾಮಗಳು ಅಧ್ಯಯನಕ್ಕೆ ವಿಷಯ ವಸ್ತುವಾಗಿರುತ್ತದೆ. ಆಯಾ ಕಾಲದಲ್ಲಿ ಬದುಕಿ ಬಾಳಿದ ಲೇಖಕಿಯರು ಅಂದಿನ ಜನಜೀವನದ ಆಶೋತ್ತರಗಳನ್ನು ಕೇಂದ್ರವಾಗಿಟ್ಟುಕೊಂಡು ಸಂವೇದನಾಶೀಲ ಸಾಹಿತ್ಯ ಸೃಷ್ಟಿಯನ್ನು ಮಾಡಿದ್ದರಿಂದ ಸಾಹಿತ್ಯವು ಸಮಾಜದ ಧ್ವನಿಯಾಗಿರುತ್ತದೆ"(ಕನ್ನಡ ಸಾಹಿತ್ಯ: ಮಹಿಳಾ ಚಿಂತನೆಗಳು. ಸಂಪುಟ 1. ಪು.ಸಂ.345). ಈಗ ಗಮನಿಸಿ ಸಾಹಿತ್ಯವು ಸಮಾಜದ ಧ್ವನಿಯಾಗಿದ್ದಲ್ಲಿ ಅದೇ ಸಾಹಿತ್ಯದಲ್ಲಿ ಬಂದ ಸ್ತ್ರೀ ಸಂವೇದನೆಗಳು ಮತ್ತು ಸ್ತ್ರೀ ಅಸ್ಮಿತೆಯ ವಿಚಾರಗಳು ಅದೇ ಸಮಾಜದ ಧ್ವನಿಯಾಗಿ ವರ್ತಿಸಲಾರವೆ? ಅಥವಾ ಹಾಗೆ ವರ್ತಿಸುತ್ತಿರುವ ಧ್ವನಿಗಳನ್ನು ಗುರುತಿಸುವಲ್ಲಿ ವಿಮರ್ಶಕರು ತಮ್ಮದೇ ಪಾರಂಪರಿಕ ವಿಧಾನಗಳನ್ನು ಹಿಡಿದುಕೊಂಡು ಹೊಸ ಸಾಧ್ಯತೆಗಳೆಡೆಗೆ ಸಾಗುವುದನ್ನು ಕೈ ಬಿಟ್ಟಿದ್ದಾರೆಯೇ ಎಂಬ ಪ್ರಶ್ನೆ ಹುಟ್ಟುತ್ತದೆ. ಒಬ್ಬ ಯುವ ಸಂಶೋಧಕಿಗೆ ಹೀಗೆ ಸಂಶಯಗಳು ಉಂಟಾಗುತ್ತಿದ್ದಲ್ಲಿ, ಈಗಾಗಲೇ ಸ್ತ್ರೀಪರ ಸಾಹಿತ್ಯದ ಕುರಿತು ಸಾಕಷ್ಟು ಕೆಲಸಗಳನ್ನು ಮಾಡಿರುವ ಚೇತನಾ ಹೆಗಡೆಯವರಿಗೆ ಇದಕ್ಕಿಂತ ಉತ್ತಮವಾದ ಕಾರಣಗಳು ಈ ಸಂಶೋಧನೆಯನ್ನು ಕೈಗೊಳ್ಳಲು ಒತ್ತಡವನ್ನು ಹೇರಿರಬೇಕು.

ಈ ಕೃತಿಯಲ್ಲಿ ಎತ್ತಲಾದ ಬಹುಮುಖ್ಯವಾದ ಪ್ರಶ್ನೆಗಳಲ್ಲಿ ಒಂದು ಹೆಣ್ತನ. ಈ ಪ್ರಶ್ನೆ ಹಲವರನ್ನು ಈಗಾಗಲೇ ಬಹುವಾಗಿ ಕಾಡಿದೆ. ಹೆಣ್ತನ ಎಂಬುದನ್ನು ಸಮಾಜ ಕೇವಲ ಮಕ್ಕಳನ್ನು ಹೆರುವ ಕೆಲಸಕ್ಕೆ ಆರೋಪಿಸಿದೆ. ಹಿಂದೆಯೇ ಹೇಳಿದಂತೆ ನಮ್ಮವರು ಹೆಣ್ಣಿನ ಮೇಲೆ ಈಗಾಗಲೇ ಕೆಲವಾರು ಸಿದ್ಧ ಮಾದರಿಗಳನ್ನು ಆರೋಪಿಸಿದ್ದಾರೆ. ಅದರಲ್ಲಿ ಪಾತಿವ್ರತ್ಯ, ಸೌಮ್ಯತೆ, ಕರುಣಾಮಯಿ, ತ್ಯಾಗಮೂರ್ತಿ ಮುಂತಾದ ಮಾದರಿಗಳನ್ನು ಅವಳ ಮೇಲೆ ಆರೋಪಿಸಲಾಗಿದೆ. ಆಕೆಗೆ ತಾನು ಈ ಸಿದ್ಧ ಮಾದರಿಯಲ್ಲಿ ಬದುಕುವುದು ಮತ್ತು ಆ ಮೂಲಕ ತಮ್ಮ ಹಿರಿಯರ ಗೌರವವನ್ನು ಉಳಿಸುವುದು ಅಗತ್ಯವೆಂದೆನಿಸುತ್ತದೆ. ಅಥವಾ ಹಾಗೆ ಕಾಣುವಂತೆ

ಆಕೆಯನ್ನು ಮ್ಯಾನ್ಯುಪಲೇಟ್ ಮಾಡಲಾಗಿದೆ. ಆದರೆ ಬದಲಾಗುತ್ತಿರುವ ಕಾಲ ಮತ್ತು ಸಾಮಾಜಿಕ ಅಗತ್ಯತೆಗಳಿಗೆ ಹೊಂದುವಂತೆ ಹೆಣ್ಣಿಗೆ ತನ್ನೊಳಗಡೆ ಭಾವನಾತ್ಮಕವಾಗಿ ಮತ್ತು ಭೌತಿಕವಾಗಿ ಬದಲಾವಣೆಗಳನ್ನು ತಂದುಕೊಳ್ಳುವುದು ಅನಿವಾರ್ಯವಾಗುತ್ತದೆ. ವಿಷಾದವೇನೆಂದರೆ ತೀರ ಇತ್ತೀಚಿನವರೆಗೆ ಅಂದರೆ ಮಹಿಳಾ ಚಿಂತನೆಗಳು ಮತ್ತು ಹೋರಾಟಗಳು ಶುರುವಾಗುವವರೆಗೂ ಸ್ತ್ರೀಯರಿಗೆ ಅವರ ಮೇಲೆ ಇಂತಹ ಸಿದ್ಧ ಮಾದರಿಯನ್ನು ಹೇರಲಾಗುತ್ತಿದೆ ಎಂದಾಗಲಿ, ಅಂತಹ ಸಿದ್ಧ ಮಾದರಿಗಳು ಸಮಾಜದಲ್ಲಿ ಅಸ್ತಿತ್ವದಲ್ಲಿ ಇವೆ ಎಂಬುದರ ಅರಿವು ಇರಲಿಲ್ಲ ಎಂಬುದನ್ನು ನಾನಾ ಸಂದರ್ಭಗಳ ಉದಾಹರಣೆಗಳನ್ನು ಕೊಡುತ್ತಾ ಲೇಖಕರು ಚರ್ಚಿಸಿದ್ದಾರೆ. ತಾಯ್ತನದ ಪರಿಕಲ್ಪನೆಯು ನಿರ್ದಿಷ್ಟವಾಗಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ಮೂಡಿಬಂದಿತು ಎಂಬುದನ್ನು ಮರೆಯುವಂತಿಲ್ಲ. ಯಾರು ಮಕ್ಕಳನ್ನು ಹೆತ್ತು ತಾಯ್ತನವನ್ನು ಅನುಭವಿಸಲಾರಳೋ ಆಕೆ ಹೆಣ್ಣಾಗಲಾರಳು. ಮಕ್ಕಳನ್ನು ಹೆರದ ಹೆಣ್ಣನ್ನು ಬಂಜೆ ಎಂದು ಹಿಂಸಿಸಲಾಗುತ್ತದೆ. 'ತಾಯಿಯೇ ಪ್ರತ್ಯಕ್ಷ ದೇವರು' ಎಂದು ಆಕೆಯನ್ನು ಉತ್ತುಂಗದಲ್ಲಿರಿಸಿದ್ದಾರೆ ಆದರೂ ಒಂದು ವೇಳೆ ಆಕೆ ತಾಯಿಯಾಗಲಾರದೆ ಹೋದರೆ ಅವಳ ಅಸ್ತಿತ್ವವನ್ನು ನಿರಾಕರಿಸಲಾಗುತ್ತಿತ್ತು. ಆದರೆ ಬದಲಾಗುತ್ತಿರುವ ಸಮಾಜದಲ್ಲಿ ಅವಳ ತಾಯ್ತನದ ಸ್ವರೂಪವೂ ಸಕಾರಾತ್ಮಕ ಬದಲಾವಣೆಗೆ ಒಳಗಾಗಿದೆ ಎಂಬುದನ್ನು ಚೇತನಾ ಅವರು ಗುರುತಿಸುತ್ತಾರೆ.

ಹೆಣ್ಣಿನ ಅಸ್ಮಿತೆ ಎಂಬುದು ಈ ಹಿಂದೆ ಸಮಾಜ ಆರೋಪಿಸಿರುವ ಯಾವುದೇ ಮಾದರಿಗಳಲ್ಲಿಯೂ ಅಡಗಿಲ್ಲ. ಅದು ಆಕೆಯ ಸ್ವಂತ ನಿರ್ಧಾರಗಳ ಹಿನ್ನೆಲೆಯಲ್ಲಿ ಪ್ರತಿಬಿಂಬಿತವಾಗುತ್ತದೆ. ಅದನ್ನು ನಿರೂಪಿಸಿಕೊಳ್ಳಲು ಬೇರೆ ಯಾರದೆ ನಿರ್ಧಾರಗಳ ಅಥವಾ ಸಾಕ್ಷಿಗಳ ಅಗತ್ಯವಿಲ್ಲ ಎಂಬುದನ್ನು ಈ ಕೃತಿಯು ಸ್ಪಷ್ಟೀಕರಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಇದೊಂದು ಸ್ತ್ರೀವಾದಿ ಚಿಂತನೆಗಳ ವಿಷಯಕ್ಕೆ ಸಂಬಂಧಿಸಿದ ಹೊಸ ಚಿಗುರಿನ ಹಳೆ ಬೇರಿನ ಕೃತಿಯಾಗಿದೆ. ಓದುಗರನ್ನು ಸುಲಭವಾಗಿ ಹಿಡಿದಿಟ್ಟುಕೊಳ್ಳುವ ಹೊಸ ಸಂಶೋಧಕರಿಗೆ ದಾರಿದೀಪವಾಗುವ, ವಿಮರ್ಶಕರಿಗೆ ಉತ್ತಮ ವಿಮರ್ಶಾ ವಿಮಾನದಂಡಗಳನ್ನು ನೀಡುವ ಕೃತಿಯಾಗಿ ಸಮಾಜಕ್ಕೆ ಲಗ್ಗೆ ಇಟ್ಟಿರುವುದು ಶ್ಲಾಘನೀಯ. ಈ ಹಿಂದೆ ಹಲವಾರು ಕೃತಿಗಳು ಕನ್ನಡದಲ್ಲಿ ಈ ಬಗೆಯ ಕೆಲಸವನ್ನು ಮಾಡುವಲ್ಲಿ ತಮ್ಮನ್ನು ತಾವು ಪ್ರತಿನಿಧಿಸಿಕೊಂಡಿವೆ. ಅಂತಹುದೇ ಒಂದು ಉತ್ತಮ ಕೃತಿ ಇದಾಗಿದೆ. ಕನ್ನಡದ ಶಿಷ್ಟ ಮತ್ತು ಜಾನಪದ ಸಾಹಿತ್ಯಗಳೆರಡನ್ನೂ ಅವಲೋಕಿಸಿ ಬರೆದಿರುವ ಈ ಕೃತಿಯು ಹಿಂದಿನ ಕೃತಿಗಳಿಗಿಂತ ಸುಲಭವಾದದಾಗಿದೆ ಏಕೆಂದರೆ ಓದುಗನ ಅಗತ್ಯಗಳನ್ನು ಇದು ಸರಳ ಮಾದರಿಗಳನ್ನು ಅನುಸರಿಸಿ ಪೂರೈಸುವ ಕಾರಣಕ್ಕಾಗಿ ಇದನ್ನು ಸುಲಭ ಎಂದು ಕರೆಯುವುದು ಸೂಕ್ತ ಎಂದೆನಿಸುತ್ತದೆ.

## ಆಕರ ಗ್ರಂಥ:

1. ಚೇತನಾ ಹೆಗಡೆ, (2025), ಸ್ತ್ರೀ ಅಸ್ಮಿತೆ: ವಿಭಿನ್ನ ನೆಲೆಗಳು, ಅವ್ಯಕ್ತ ಪ್ರಕಾಶನ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.